**Order Sheet**
**In the Court Of: PRL. CIVIL JUDGE AND JMFC BELAGAVI**
**AT BELGAUM**
**F.R.No:O.S./1357/2012**
**Case Reg.No: O.S./1357/2012**

| **Plaintiff** | V E R S U S | **Defendent** |
|---|---|---|

---

| | |
|---|---|
| **1)Smt. Laxmi W o. Ningani Santaji &3 others** | **1)Shri. Jyoti So. Bhima Santaji &6 others** |
| **2)Miss. Varsha Do. Ningani Santaji**<br>**3)Smt. Madhura @ Sangeeta Wo. Amarnath Gavane** | **2)Shri. Fakira So. Jyoti Santaji**<br>**3)Shri. Bhima So. Jyoti Santaji**<br>**4)Shri. Krishna So. Jyoti Santaji**<br>**5)Shri. Balakrishna So. Dundappa Muchandi**<br>**6)Shri. Peeraji So. Dundappa Muchandi** |

<u>ಅಸಲು ದಾವ ಸಂಖ್ಯೆ: 1357 /2012</u>

**<u>PW 1</u>**

**ಸಾಕ್ಷಿಯನ್ನು ದಿಃ 12-10-2017 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1, 3 ಮತ್ತು 4 ಪರ ಶ್ರೀ ಎನ ಎಮ ಕೆ, ವಕೀಲರಿಂದ.**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಇಂಗ್ಲಿಷ ಓದಲು ಮತ್ತು ಬರೆಯಲು ಬರುವುದಿಲ್ಲ. 1 ನೇ ಪ್ರತಿವಾದಿ ಜ್ಯೋತಿಬಾ ನನ್ನ ಮಾವ ಎಂದರೆ ಸರಿ. ನನ್ನ ಅತ್ತೆನು ಹೆಸರು ಕೃಷ್ಣಬಾಯಿ ಎಂದು ಇರುತ್ತದೆ. ನನ್ನ ಅತ್ತೆ ಮಾವ ಇಬ್ಬರು ಜೀವಂತ ಇದ್ದಾರೆ. ನನ್ನ ಮಾವನವರ ವಯಸ್ಸು 98 ಮತ್ತು ಅತ್ತೆಯವರ ವಯಸ್ಸು 88 ಇರುತ್ತದೆ. ನನ್ನ ಮಾವನ ತಂದೆಯ ಹೆಸರು ಭೀಮಾ ಎಂದು ಇರುತ್ತದೆ. ಸದರಿ ಭೀಮಾ ಇವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಭೀಮಾ ಇವರಿಗೆ ಮೂರು ಗಂಡು ಮಕ್ಕಳು 3 ಹೆಣ್ಣು ಮಕ್ಕಳು ಇರುತ್ತಾರೆ. ಅವರ ಹೆಸರು 1. ಬಾಳಪ್ಪ 2. ಜ್ಯೋತಿಬಾ 3 ನಿಂಗಪ್ಪ ಮತ್ತು ಹೆಣ್ಣುಮಕ್ಕಳು 1. ಫಕಿರಾಬಾಯಿ 2. ಶಾಂತಬಾಯಿ 3. ರುಕ್ಮಿಣಿ ಎಂದು ಇರುತ್ತದೆ. ಸದರಿ ಇವರುಗಳಲ್ಲಿ ಜ್ಯೋತಿಬಾ ಮಾತ್ರ ಜೀವಂತ ಇದ್ದು ಉಳಿದವರು ಮೃತರಾಗಿರುತ್ತಾರೆ. ಸದರಿ ಇವರುಗಳು ಯಾವಾಗ ತೀರಿಕೊಂಡಿರುತ್ತಾರೆ

ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮಾವ ಜ್ಯೋತಿಬಾ ಇವರಿಗೆ 4 ಗಂಡು ಮಕ್ಕಳು ಮತ್ತು 5 ಹೆಣ್ಣು ಮಕ್ಕಳು ಇರುತ್ತಾರೆ. ಸದರಿ ಅವರ ಹೆಸರುಗಳು 1. ನಿಂಗಾಣಿ 2. ಫಕಿರಾ 3. ಭಿಮಾ 4. ಕೃಷ್ಣಾ ಮತ್ತು ಹೆಣ್ಣು ಮಕ್ಕಳು 1. ಚಾಕುಣಾ 2. ಸುಶೀಲಾ 3. ಸೌಂದರ್ಯಾ 4. ಲತಾ 5. ರೇಣುಕಾ ಎಂದು ಇರುತ್ತದೆ. ಸದರಿ ಇವರ ಪೈಕಿ ನಿಂಗಾಣಿ ಮತ್ತು ಸುಶೀಲಾ ಮೃತರಾಗಿರುತ್ತಾರೆ. ನಿಂಗಾಣಿ ನನ್ನ ಗಂಡ ಎಂದರೆ ಸರಿ. ನನ್ನ ಮತ್ತು ನಿಂಗಾಣಿರವರ ಮದುವೆ ದಿಃ 26-6-1981 ರಲ್ಲಿ ಆಗಿರುತ್ತದೆ. ನನ್ನ ಗಂಡ ದಿಃ 16-8-2002 ರಂದು ತೀರಿಕೊಂಡಿರುತ್ತಾರೆ. ನನಗೆ ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ಅವರ ಹೆಸರು ಮಧುರಾ ಮತ್ತು ವರ್ಷಾ ಎಂದು ಇರುತ್ತದೆ.

ನಮ್ಮ ಕುಟುಂಬದ ಒಟ್ಟು ಆಸ್ತಿಯಲ್ಲಿ 2 ಮನೆ ಮತ್ತು 3 ಜಮೀನುಗಳು ಇರುತ್ತವೆ. ಸದರಿ ಜಮೀನಿನ ಸರ್ವೆ ನಂ. 605/1 1 ಎಕರೆ 23 ಗುಂಟೆ, 605/ಬಿ 1 ಎಕರೆ 28 ಗುಂಟೆ ಮತ್ತು ಸರ್ವೆ ನಂ. 445 ಕ್ಷೇತ್ರ 32 ಗುಂಟೆ ಇರುತ್ತದೆ, ಸರ್ವೆ ನಂ. 268 ಕ್ಷೇತ್ರ 21 ಗುಂಟೆ ಇರುತ್ತದೆ. ಸದರಿ 4 ಜಮೀನಿನ ಚಕ್ಕು ಬಂದಿ ಹೇಳಲು ಬರುವುದಿಲ್ಲ. ಮನೆ ನಂ. 204/ಕ ಮತ್ತು 204/ಸಿ ಎಂದು ಇರುತ್ತದೆ. ಸದರಿ ಮನೆಯ ಚಕ್ಕುಬಂದಿ ಹೇಳಲು ಬರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಗಣಕೀಕೃತದಿಂದ ಬೆರಳಚ್ಚು ಮಾಡಲಾಯಿತು)**

**ಸಹಿ/-**

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ**

**ನ್ಯಾಯಾಲಯ ಬೆಳಗಾವಿ.**

**ಓ.ಕೆ.ಓ. ಸ.ಮಾ.**